CCE-III-RR/PR/PF/NSR/NSPR(A)/111/7129

**A**

ಆಗಸ್ಟ್ 2024 ರ ಪರೀಕ್ಷೆ-3

**AUGUST 2024 EXAMINATION-3**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 25 ]
Total No. of Questions : 25 ]

**CCE RR/PR/PF/ NSR/NSPR**
**FULL SYLLABUS**

Question Paper Serial No.

**ಸಂಕೇತ ಸಂಖ್ಯೆ : 28-K**
**Code No. : 28-K**

ಇಲ್ಲಿಂದ ಕತ್ತರಿಸಿ

# ವಿಷಯ : ಹಿಂದೂಸ್ಥಾನಿ ಸಂಗೀತ — ಶಾಸ್ತ್ರ ವಿಭಾಗ

# Subject : HINDUSTANI MUSIC — THEORY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / Private Fresh / NSR / NSPR)**

ದಿನಾಂಕ : 05. 08. 2024 ] [ Date : 05. 08. 2024

ಸಮಯ : ಮಧ್ಯಾಹ್ನ 2-00 ರಿಂದ ಸಂಜೆ 3-45 ರವರೆಗೆ ] [ Time : 2-00 P.M. to 3-45 P.M.

ಗರಿಷ್ಠ ಅಂಕಗಳು : 40 ] [ Max. Marks : 40

**05. 08. 2024**

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 25 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

Tear here

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** **8 × 1 = 8**

1. 'ಗಂಧರ್ವ ವೇದ' ಎಂದು ಕರೆಯಲ್ಪಡುವ ಕಲೆ

   (A) ಚಿತ್ರಕಲೆ

   (B) ನೃತ್ಯ

   (C) ಸಂಗೀತ

   (D) ವಾಸ್ತುಶಿಲ್ಪ

2. ಹಿಂದೂಸ್ಥಾನಿ ಸಂಗೀತವನ್ನು ಉತ್ತರಾದಿ ಸಂಗೀತ ಎಂದು ಕರೆಯುವರು. ಏಕೆಂದರೆ, ಈ ಸಂಗೀತ ಪ್ರಕಾರವು

   (A) ಉತ್ತರ ಭಾರತದಲ್ಲಿ ಬೆಳೆದು ಬಂದಿದೆ

   (B) ದಕ್ಷಿಣ ಭಾರತದಲ್ಲಿ ಬೆಳೆದು ಬಂದಿದೆ

   (C) ಭಾರತದಾದ್ಯಂತ ಬೆಳೆದು ಬಂದಿದೆ

   (D) ಕರ್ನಾಟಕದಲ್ಲಿ ಮಾತ್ರ ಬೆಳೆದು ಬಂದಿದೆ

3. ಸಿತಾರ ವಾದ್ಯವನ್ನು ತಂತಿವಾದ್ಯ ಎಂದು ಕರೆಯುವರು. ಏಕೆಂದರೆ, ಈ ವಾದ್ಯದಲ್ಲಿ ಸ್ವರೋತ್ಪತ್ತಿಯು

(A) ತಂತಿ ಮೀಟುವುದರಿಂದ ಉಂಟಾಗುತ್ತದೆ

(B) ಗಾಳಿಯ ಸಹಾಯದಿಂದ ಉಂಟಾಗುತ್ತದೆ

(C) ಚರ್ಮವನ್ನು ಬಳಸಿರುವುದರಿಂದ ಉಂಟಾಗುತ್ತದೆ

(D) ಲೋಹದ ಸಹಾಯದಿಂದ ಉಂಟಾಗುತ್ತದೆ

4. 'ಕರ್ನಾಟಕ ಶಾಸ್ತ್ರೀಯ ಸಂಗೀತ ಪಿತಾಮಹ'

(A) ತಾನ್‌ಸೇನ್

(B) ಕನಕದಾಸರು

(C) ಸ್ವಾಮಿ ಹರಿದಾಸರು

(D) ಪುರಂದರದಾಸರು

5. ರಾಗವು ವಿಸ್ತಾರಗೊಂಡು ಧೃತ್ ಲಯದಲ್ಲಿ ಸಾಗುವ ಕಿರು ರಚನೆಯೇ

(A) ಧ್ರುಪದ್

(B) ಧಮಾರ್

(C) ಛೋಟಾ ಖಯಾಲ್

(D) ಬಡಾ ಖಯಾಲ್

6. ಬೃಂದಾವನಿ ಸಾರಂಗ ರಾಗದ ಆರೋಹಣ ಮತ್ತು ಅವರೋಹಣದಲ್ಲಿ ಕಂಡುಬರುವ ಒಂದು ಮುಖ್ಯ ಸ್ವರ ವ್ಯತ್ಯಾಸ

(A) ನಿಷಾದ ಬದಲಾವಣೆ

(B) ಮಧ್ಯಮ ಬದಲಾವಣೆ

(C) ರಿಷಭ ಬದಲಾವಣೆ

(D) ಪಂಚಮ ಬದಲಾವಣೆ

7. ಸ್ವರಲಿಪಿಯಲ್ಲಿ 'ಮ' ಸ್ವರದ ಮೇಲೆ ಒಂದು ಚಿಕ್ಕ ಲಂಬಗೆರೆಯನ್ನು ಕೊಡಲಾಗುವುದು. ಏಕೆಂದರೆ, ಈ ಸ್ವರವು

(A) ಶುದ್ಧ ಸ್ವರ

(B) ಕೋಮಲ ಸ್ವರ

(C) ವರ್ಜ್ಯ ಸ್ವರ

(D) ತೀವ್ರ ಸ್ವರ

8. ರಾಗದ ಛಾಯೆಯನ್ನು ಪ್ರತಿಬಿಂಬಿಸುವ ಸ್ವರ ಸಮೂಹವೇ

(A) ಪೂರ್ವಾಂಗ

(B) ಉತ್ತರಾಂಗ

(C) ಮುಖ್ಯಾಂಗ

(D) ಮೀಂಡ್ ಸ್ವರ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : 8 × 1 = 8**

9. ಶೃತಿ ಎಂದರೇನು ?

10. ಜೋನ್‌ಪುರಿ ರಾಗವನ್ನು ಷಾಡವ-ಸಂಪೂರ್ಣರಾಗ ಎಂದು ಕರೆಯಲು ಕಾರಣವೇನು ?

11. ಸಂಗೀತದ ಕಲಿಕಾರ್ಥಿಗಳು ಸ್ವರಾಭ್ಯಾಸಗಳನ್ನು ಮಾಡಬೇಕು. ಏಕೆ ?

12. ಹಿಂದೂಸ್ಥಾನಿ ಸಂಗೀತದ ಸ್ವರಲಿಪಿ ಪದ್ಧತಿಗಳನ್ನು ಹೆಸರಿಸಿ.

13. ಪಟ್‌ದೀಪ್ ರಾಗ ಮತ್ತು ಭೀಮ್‌ಫಲಾಸ್ ರಾಗಗಳಲ್ಲಿ ಇರುವ ಒಂದು ಮುಖ್ಯ ವ್ಯತ್ಯಾಸವನ್ನು ಬರೆಯಿರಿ.

14. ಮಲ್ಲಿಕಾರ್ಜುನ ಮನಸೂರರಿಗೆ ಭಾರತ ಸರ್ಕಾರ ನೀಡಿದ ಪ್ರಶಸ್ತಿಯನ್ನು ಹೆಸರಿಸಿ.

15. ಸಂಗೀತಗಾರರಿಗೆ ಶ್ರವಣಜ್ಞಾನದ ಅಗತ್ಯತೆ ಇದೆ. ಏಕೆ ?

16. ಭೈರವಿ ರಾಗದ ಗಾಯನ ಸಮಯವನ್ನು ಬರೆಯಿರಿ.

**III. ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ : $7 \times 2 = 14$**

17. ಪಂಡಿತ ಬಸವರಾಜ ರಾಜಗುರುಗಳ ಗಾಯನ ತುಂಬಾ ಪರಿಣಾಮಕಾರಿಯಾದುದು ಹೇಗೆ ? ವಿವರಿಸಿ.

18. ಸಂಗೀತದಲ್ಲಿ ಆರೋಹಣ ಮತ್ತು ಅವರೋಹಣಗಳಿಗೆ ಇರುವ ವ್ಯತ್ಯಾಸವನ್ನು ಉದಾಹರಣೆಯೊಂದಿಗೆ ವಿವರಿಸಿ.

19. ಹಿಂದೂಸ್ಥಾನಿ ಸಂಗೀತವು ಕರ್ನಾಟಕದಲ್ಲಿ ಬೇರೂರಿದ ಪರಿ ಹೇಗೆ ? ವಿವರಿಸಿ.

20. ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತ ಪದ್ಧತಿಯಲ್ಲಿ ಕಂಡುಬರುವ ಎರಡು ವ್ಯತ್ಯಾಸಗಳನ್ನು ಬರೆಯಿರಿ.

21. ವಾದಿ ಸ್ವರ ಮತ್ತು ಸಂವಾದಿ ಸ್ವರಗಳಿಗೆ ಇರುವ ವ್ಯತ್ಯಾಸವನ್ನು ಉದಾಹರಣೆ ಮೂಲಕ ವಿವರಿಸಿ.

22. ಭೈರವ್ ಮತ್ತು ಬಿಬಾಸ್ ರಾಗಗಳಲ್ಲಿ ಕಂಡುಬರುವ ಎರಡು ಸಾಮ್ಯತೆಗಳನ್ನು ಬರೆಯಿರಿ.

23. ಈ ಕೆಳಗಿನ ರಾಗಗಳಲ್ಲಿ ಖಮಾಜ್ ಮತ್ತು ಬಿಲಾವಲ್ ಥಾಟಿಗೆ ಸೇರುವ ರಾಗಗಳನ್ನು ವರ್ಗೀಕರಿಸಿ ಬರೆಯಿರಿ :

ದುರ್ಗಾ, ದೇಸ್, ಬಿಹಾಗ್, ತಿಲಂಗ್.

**IV. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

24. ಪಂಡಿತ ಪಂಚಾಕ್ಷರಿ ಗವಾಯಿಗಳು ಸಂಗೀತದ ಬೆಳವಣಿಗೆಗೆ ಪರಿಶ್ರಮಿಸಿದುದು ಹೇಗೆ ? ವಿವರಿಸಿ. **6**

25. ಭೂಪಾಲಿ ರಾಗದ ಸ್ವರಗೀತೆಯನ್ನು ಲಿಪಿಬದ್ಧಗೊಳಿಸಿ. **4**

DO NOT WRITE ANYTHING HERE